ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮೊದಲು ಕ್ರಮ ತೆಗೆದು ಕೊಳ್ಳುತ್ತಿದ್ದು, ಇದಾದನಂತರ ನೇರ ನೇಮಕಾತಿ ಮಾಡಲು ಕ್ರಮ ಕೈಗೊಂಡು ತುಂಬಲಾಗುವುದು.

ವಿರಾಜಪೇಟೆ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜು ಮಾಡುವ ಬಗ್ಗೆ

2782 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿರಾಜಪೇಟೆ ತಾಲ್ಲೂಕಿನಲ್ಲಿ 1990-91 ಸಾಲಿಗೆ ಎಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಬಸ್ತಿಗಳನ್ನು ವಿದ್ಯುದ್ದೀಕರಣ ಮಾಡುವ ಗುರಿಯನ್ನು ಸರ್ಕಾರವು ಹೊಂದಿದೆ?*

ಆ) *ಇವುಗಳಲ್ಲಿ ವಿದ್ಯುದ್ದೀಕರಣ ಮಾಡಲಾದ ಬಸ್ತಿಗಳ ಸಂಖ್ಯೆ ಎಷ್ಟು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಎರಡು ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಿಸಲು ಗುರಿಯನ್ನು ನಿಗದಿಪಡಿಸಲಾಗಿತ್ತು. ಹರಿಜನ ಬಸ್ತಿಗಳನ್ನು ವಿದ್ಯುದ್ದೀಕರಿಸುವ ಬಗ್ಗೆ ಯಾವ ಗುರಿಯನ್ನು ನಿಗಧಿಪಡಿಸಿರಲಿಲ್ಲ.

ಆ) ಎರಡು ಗಿರಿಜನ ಕಾಲೋನಿಗಳನ್ನು ವಿದ್ಯುದ್ದೀಕರಿಸಿ ಗುರಿಯನ್ನು ಸಾಧಿಸಲಾಗಿದೆ. ಹರಿಜನ ಬಸ್ತಿಗಳ ವಿದ್ಯುದ್ದೀಕರಣಕ್ಕೆ ಗುರಿಯನ್ನು ನಿಗದಿಪಡಿಸಿಲ್ಲವಾದುದರಿಂದ ಯಾವ ಹರಿಜನ ಬಸ್ತಿಗಳನ್ನೂ ವಿದ್ಯುದ್ದೀಕರಿಸಿಲ್ಲ.

ಕೊಡಗು ಜಿಲ್ಲೆಯ ವಿರಾಜಪೇಟೆಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ

2783 - ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91ನೇ ಸಾಲಿನಲ್ಲಿ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲ್ಲೂಕು ವಿದ್ಯುಚ್ಛಕ್ತಿ ವಿಭಾಗದಲ್ಲಿ ಕೃಷಿ ಪಾಪಿಗಳಿಗೆ ವಿದ್ಯುಚ್ಛಕ್ತಿ ಒದಗಿಸಲು ನಿಗದಿಪಡಿಸಿರುವ ಗುರಿ ಎಷ್ಟು?*

ಆ) *ಫೆಬ್ರವರಿ 28, 1991 ರವರೆಗೆ ಸಾಧಿಸಿರುವ ಗುರಿ ಎಷ್ಟು?*

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) ಗುರಿ 190

ಆ) ಸಾಧಿಸಿದ ಗುರಿ 80

ಕೊಡಗು ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳ ಕಾರ್ಯ ವೈಖರಿ ಬಗ್ಗೆ

2784 - ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೊಡಗು ಜಿಲ್ಲೆಯಲ್ಲಿ ಈಗ ಇರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು)*

ಅ) ಇವುಗಳಲ್ಲಿ ಖಾಸಗಿ ಹಾಗೂ ಸಹಕಾರಿ ಸಂಘಗಳು ನಡೆಸುತ್ತಿರುವ ಸಂಖ್ಯೆ ಎಷ್ಟು?

ಇ) ಈ ನ್ಯಾಯಬೆಲೆ ಅಂಗಡಿಗಳ ಗ್ರಾಹಕರಿಗೆ ವಂಚನೆ , ಮೋಸ ಮಾಡಿದ ಪ್ರಕರಣಗಳು ಇದೆಯೇ? ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ?

ಈ) ಗ್ರಾಹಕರ ಹಿತಕ್ಕಾಗಿ ಈ ನ್ಯಾಯಬೆಲೆ ಅಂಗಡಿಗಳನ್ನು ಕಾಲಕಾಲಕ್ಕೆ ಬಿಗುವಿನ ತಪಾಸಣೆ ತನಿಖೆ ಮಾಡಲಾಗುತ್ತದೆಯೆ?

ಶ್ರೀ ಟಿ.ಎನ್. ನರಸಿಂಹ ಮೂರ್ತಿ (ಆಹಾರ ಮತ್ತ ನಾಗರೀಕ ಸರಬರಾಜು ಸಚಿವರು)

ಅ) 249

ತಾಲ್ಲೂಕುವಾರು ಎವರ ಕೆಳಕಂಡಂತಿದೆ

	ಗ್ರಾಮಾಂತರ	ಪಟ್ಟಣ	ಒಟ್ಟು
ಮಡಕೇರಿ	53	11	64
ವಿರಾಜಪೇಟೆ	89	-	89
ಸೋಮವಾರಪೇಟೆ	96	-	96
ಒಟ್ಟು	238	11	249

ಆ) 77 ಖಾಸಗಿಯವರಿಂದ

172 ಸಹಕಾರಿ ಸಂಘಗಳಿಂದ

ಇ) ಇಂತಹ ಪ್ರಕರಣಗಳು ಇವೆ.

ಅವ್ಯವಹಾರದಲ್ಲಿ ತೊಡಗಿದ್ದ 3 ನ್ಯಾಯಬೆಲೆ ಅಂಗಡಿಗಳ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗಿದೆ.

ಈ) ಹೌದು, ತನಿಖೆ ಮಾಡಲಾಗುತ್ತಿದೆ.

ಹಸಿರು ಕಾರ್ಡುಗಳ ಸಂಖ್ಯೆ ಬಗ್ಗೆ

2785 - ಶ್ರೀಮತಿ ಸುಮಾ ವಸಂತ್ (ವಿರಾಜಪೇಟೆ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಹಸಿರು ಕಾರ್ಡುಗಳನ್ನು ಒದಗಿಸಿದವರ ಸಂಖ್ಯೆ ಎಷ್ಟು? ಎಷ್ಟು ಜನರಿಗೆ ಹಸಿರು ಕಾರ್ಡುಗಳನ್ನು ಒದಗಿಸಲಾಗಿದೆ?

ಆ) ಕೊಡಗು ಜಿಲ್ಲೆಯಲ್ಲಿ ಒದಗಿಸಲಾದ ತಾಲ್ಲೂಕುವಾರು ಕಾರ್ಡುಗಳ ಸಂಖ್ಯೆ ಎಷ್ಟು?

ಇ) ಅನೇಕ ಬಡ ಜನತೆಗೆ ಈ ಹಸಿರು ಕಾರ್ಡು ಸಿಕ್ಕುವುದಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಅವುಗಳನ್ನು ಎಂದಿನಿಂದ ಹಂಚಲಾಗುವುದು?

ಶ್ರೀ ಟಿ.ಎನ್. ನರಸಿಂಹ ಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)